
ಕೊಡುತ್ತಿತ್ತು. ಮಗಳು ಯಾವುದೇ ಕೆಲಸ ಮಾಡದೇ ಮನೆಯಲ್ಲಿದ್ದರೂ ಮಹಾರಾಣಿಯ ಥರ ಬದುಕಬೇಕು ಎಂದು ಅವಳ ಅಪೇಕ್ಷೆ. ತಾವಿರುವ ಬೆಂಗಳೂರಿನಲ್ಲೇ ಇರುವ ಹುಡುಗ ಸಿಕ್ಕಿದರೆ ಮಗಳು ತಮ್ಮ ಕಣ್ಣ ಮುಂದಿರುತ್ತಾಳೆ. ಕಷ್ಟ, ಸುಖ ಅಂದರೆ ಅವಳಿಗೆ ನಾವು, ನಮಗೆ ಅವಳು ಆಧಾರ. ಅಳಿಯನಾಗುವವನ ಜೊತೆ ಅವನ ತಂದೆ, ತಾಯಿ ಇರದಿದ್ದರೆ ಮತ್ತಷ್ಟು ಅನುಕೂಲ. ಅಳಿಯ ತಮ್ಮನ್ನು ನೆಚ್ಚಿಕೊಂಡಿರುತ್ತಾನೆ. ಹೀಗೆ ಒಂದೊಂದಲ್ಲ ಅವಳ ನಿರೀಕ್ಷೆಗಳು. ಕೊನೆಗೂ ಇವೆಲ್ಲಾ ನನಸಾಗುವ ಕಾಲ ಬಂತಾ? ಹುಡುಗ ಬೆಂಗಳೂರಿನಲ್ಲಿ ಒಳ್ಳೆಯ ಕಂಪೆನಿಯಲ್ಲಿ ಉದ್ಯೋಗದಲ್ಲಿದ್ದಾನೆ. ಎಂಜಿನಿಯರ್ ಅಂದಮೇಲೆ ಕೈತುಂಬಾ ಸಂಬಳ. ಆಗಾಗ ವಿದೇಶಕ್ಕೆ ಹೋಗುವ ಅವಕಾಶ. ಅವನ ಅಪ್ಪ, ಅಮ್ಮ ಮಂಗಳೂರಿನ ನಿವಾಸಿಗಳು. ತಂದೆಗೆ ರಿಯಲ್ ಎಸ್ಟೇಟ್ ವ್ಯವಹಾರ. ಮಗಳಿಗೆ ಮದುವೆಯಾಗಿ ಅವಳು ಕಾಯಂ ಆಗಿ ಆ ಊರಲ್ಲೇ ಇರುವುದರಿಂದ ಹೆತ್ತವರಿಗೆ ಮಗನ ಜೊತೆ ಬಂದಿರಬೇಕಾದ ಅನಿವಾರ್ಯತೆ ಇಲ್ಲ. ಯೋಗಕ್ಷೇಮ ನೋಡಿಕೊಳ್ಳುವುದಕ್ಕೆ ಹತ್ತಿರದಲ್ಲಿದ್ದಾಳೆ ಮಗಳು. ಇಷ್ಟೆಲ್ಲಾ ಗುಡ್ಡ ಗುಣಿಸಿ ಈ ಪಾರ್ಟಿ ಆಗಬಹುದು ಎಂದು ತೀರ್ಮಾನಿಸಿದ್ದಳು ಭಾಮಾ ಇಷ್ಟಾದರೂ ಅವಳು ಕಣ್ಣು ಮುಚ್ಚಿಕೊಂಡು ಈ ಸಂಬಂಧ ಬೆಳೆಸಲು ಹೊರಟಿರಲಿಲ್ಲ. ತಣ್ಣೀರನ್ನೂ ತಣಿಸಿ ಕುಡಿಯುವ ಜಾಣೆ. ರಂಗೋಲಿ ಕೆಳಗೆ ತೂರುವಷ್ಟು ಬುದ್ಧಿವಂತೆ. ಮಂಗಳೂರಿನಲ್ಲಿ ಇವರ ಬಳಗದ ಕೆಲವರಾದರೂ ಇದ್ದಾರೆ. ಸ್ವತಃ ಭಾಮಾನ ತಮ್ಮ, ಅಂದರೆ ಚಿಕ್ಕಪ್ಪನ ಮಗ ಅಲ್ಲಿ ನೆಲೆಯೂರಿದ್ದಾನೆ. ಬೀಗತನ ಮಾಡಲು ಹೊರಟವರ ವಿಷಯವನ್ನು ಅವನಿಂದ ಆಮೂಲಾಗ್ರ ಸಂಗ್ರಹಿಸಿದ್ದಳು ಭಾಮಾ ಅಕ್ಕನ ಮಗಳು ಎನ್ನುವ ವಾಂಛಲ್ಯದಿಂದ, ಜವಾಬುದಾರಿಯಿಂದ ಅವನೂ ತನಗೊಪ್ಪಿಸಿದ ಕೆಲಸವನ್ನು ಶ್ರದ್ಧೆಯಿಂದ ಮಾಡಿದ್ದ. ವಾಸ್ತವವಾಗಿ ಭಾಮಾ ಅಂದುಕೊಂಡಿದ್ದಕ್ಕಿಂತಾ ಆರ್ಥಿಕವಾಗಿ ಪಾರ್ಟಿ ಗಟ್ಟಿ ಕುಳ. ಬಾಡಿಗೆ ಬರುವ ಮನೆಗಳೇ ಏಳೆಂಟಿವೆ. ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಒಳ್ಳೇ ಕಮಾಯಿ ಇದೆ. ಸುದ್ದಿ ತಲುಪುತ್ತಿದ್ದಂತೆ ಭಾಮಾ ನಂಬಿದ ದೇವರಿಗೆ ಹರಕೆ ಕಟ್ಟಿಕೊಂಡಾಗಿತ್ತು. ಫೋಟೋದಲ್ಲಿ ಲಕ್ಷಣವಾಗಿ ಕಾಣುವ ಹುಡುಗ ತೆಗೆದು ಹಾಕುವಂತಿರುವುದಿಲ್ಲ ಎಂದು ಅವಳ ನಂಬಿಕೆ. ಹೇಳಿ ಮಾಡಿಸಿದ ಹಾಗಿತ್ತು ಜಾತಕ. ಹುಡುಗನ ಅಪ್ಪ ಒತ್ತು ಕೊಟ್ಟಿದ್ದೂ ಈ ವಿಷಯಕ್ಕೇ. 'ಜಾತಕ ಮಾತ್ರಾ ಹೈಕ್ಲಾಸಾಗಿ ಹೊಂದಬೇಕು. ನಾವು ಅದನ್ನೆಲ್ಲಾ ನಂಬೋ ಜನ' ಎಂದು ಖಡಕ್ಕಾಗಿ ಹೇಳಿದ್ದರು ಮನುಷ್ಯ.



ಹುಡುಗ ಮನಸ್ಸು ಮಾಡಿದ್ದರೆ ಬೆಂಗಳೂರಿನಲ್ಲೇ ಹುಡುಗಿಯನ್ನು ನೋಡಲು ಅಡ್ಡಿಯೇನಿರಲಿಲ್ಲ. ಅದ್ಯಾಕೋ ಅವನಿಗೆ ಈ ಮಾತು ಪಥ್ಯವಾಗಿರಲಿಲ್ಲ. 'ವೀಕೆಂಡಲ್ಲಿ ಊರಿಗೆ ಹೋಗ್ತೀನಿ. ನೀವೇ ಅಲ್ಲಿಗೆ ಬಂದ್ರೆ ನಮ್ಮನೆಯೋರೆಲ್ಲಾ ನೋಡಿದ ಹಾಗಾಗುತ್ತೆ' ಎಂದು ನುಣುಚಿಕೊಂಡಿದ್ದ. ಸಂಕೋಚವಾ ಅಥವಾ ಇವರೆಲ್ಲಾ ಅಲ್ಲಿಗೆ ಬಂದು ತಮ್ಮ ಮನೆ, ಪರಿಸರ, ಪರಿಸ್ಥಿತಿ ನೋಡಲಿ ಎನ್ನುವ ಹೆಚ್ಚುಗಾರಿಕೆಯೋ? ಹೂಂಗುಟ್ಟಿದ್ದರು ಇವರು.

'ಬರೀ ಅರ್ಜೆಂಟು ನಿಂಗೆ. ಇಷ್ಟು ಬೇಗ ನಂಗೆ ಮದುವೆ ಬೇಡ ಅಂದ್ರೆ ಅರ್ಥಾನೇ ಆಗಲ್ಲ...' ಮಗಳು ಅಡ್ಡ ಮಾತು ಹೇಳಿದ್ದರೂ ಅಮ್ಮನೊಡನೆ ಹೆಚ್ಚು ವಾದಿಸಲು ಹೋಗಿರಲಿಲ್ಲ. ಹೊರಡುವ ಹಿಂದಿನ ದಿನ ಅಮ್ಮ ಹೇಳಿದಂತೆ ಪಾರ್ಲರಿಗೆ ಹೋಗಿ, ಹುಬ್ಬು ತಿದ್ದಿಸಿಕೊಂಡು, ಮುಖಕ್ಕೆ ಬ್ಲೀಚ್ ಮಾಡಿಸಿಕೊಂಡು, ತಲೆಗೂದಲು ಟ್ರಿಮ್ ಮಾಡಿಸಿಕೊಂಡು, ಅಮ್ಮನ ಕಣ್ಣಿಗಂತೂ ಮಗಳು ಸದಾ ಚಂದವೇ. 'ಲಕ್ಷಣವಾಗಿ ಸೀರೆ ಉಟ್ಕೋ. ಅವರು ಸ್ವಲ್ಪ ಸಂಪ್ರದಾಯಸ್ಥರ ಥರ ಕಾಣ್ತಾರೆ...' ಎನ್ನುವ ಮಾತಿಗೆ ಮಾತ್ರ ಮಗಳು ಒಪ್ಪಿರಲಿಲ್ಲ. ಒಂದೊಳ್ಳೆಯ ಚೂಡಿದಾರ್ ಹಾಕಿಕೊಂಡು ಸರಳವಾಗಿ ಹೊರಟಿದ್ದಳು.

* * *

ಹೊರನೋಟದಿಂದಲೇ ಆ ಭವ್ಯವಾದ ಬಂಗಲೆಯನ್ನಳೆದು ಭಾಮಾನಿಗೆ ಕೋಡು. ಹೆಮ್ಮೆಯ ನೋಟದಿಂದ ಅವಳು ಗಂಡನ ಕಡೆ ವೀಕ್ಷಿಸಿದರೆ ಅವನು ಸ್ಥಿತಪ್ರಜ್ಞನ ಮುಖವಾಡ ಹಾಕಿಕೊಂಡಂತೆ